
ಉತ್ತರಗಳನ್ನು ನೀಡುವುದು ಸಾಮಾನ್ಯವಾಗಿದೆ. ಆದರೆ ಮಕ್ಕಳ ಕುತೂಹಲಕ್ಕೆ ಸೂಕ್ತ ಉತ್ತರಗಳನ್ನು ವೈಜ್ಞಾನಿಕವಾಗಿ ನೀಡುವುದು ಅಗತ್ಯ. 'ಯಾವ ವಿಚಾರವನ್ನು ಬೇಕಾದರೂ ಅಪ್ಪ ಅಮ್ಮನೊಡನೆ ಚರ್ಚಿಸಬಹುದು ಎಂಬ ಮನೋಭಾವ ಮಕ್ಕಳಲ್ಲಿ ಮೂಡುವಂತೆ ಪೋಷಕರು ವರ್ತಿಸಬೇಕು. ಹಾಗಾಗಿ ಸೆಕ್ಷುವಾಲಿಟಿ ಎಜುಕೇಷನ್‌ಗೆ ಸಂಬಂಧಿಸಿದಂತೆ ಮೊದಲನೆಯ ಹಂತದಲ್ಲಿ ಪೋಷಕರಲ್ಲಿ ಅರಿವು ಮೂಡಿಸಬೇಕಾಗಿದೆ' ಎನ್ನುತ್ತಾರೆ ಚಿತ್ರಾ.

ಶಾಲೆಯಲ್ಲಿ ಮಕ್ಕಳ ವಯಸ್ಸಿಗೆ ತಕ್ಕಂತೆ ಸೆಕ್ಷುವಾಲಿಟಿ ಎಜುಕೇಷನ್ ನೀಡುವ ಕುರಿತು ಯೋಚನೆ ಮಾಡಬೇಕಾಗಿದೆ. 'ಹದಿಹರೆಯಲ್ಲಿ ದೈಹಿಕವಾಗಿ ಉಂಟಾಗುವ ಬದಲಾವಣೆಗಳೇನು ಮತ್ತು ಅದಕ್ಕೆ ಪ್ರತಿಕ್ರಿಯೆ ಹೇಗಿರಬೇಕು ಎಂಬುದನ್ನು ಗಂಡುಮಕ್ಕಳಿಗೆ ಮತ್ತು ಹೆಣ್ಣುಮಕ್ಕಳಿಗೆ ಸಮಾನವಾಗಿ ತಿಳಿಹೇಳಬೇಕಾಗಿದೆ. ಆಲೋಚನೆಗಳನ್ನು ಆಳುವುದು ಹೇಗೆ ಎಂಬುದನ್ನು ಅವರಿಗೆ ಕಲಿಸಬೇಕಾಗಿದೆ. ಆಗ ಅವರು ಆಲೋಚನೆಗಳ ಅಡಿಯಾಳಾಗುವ ಪ್ರಸಂಗ ಬರುವುದಿಲ್ಲ. ವೈಯಕ್ತಿಕವಾಗಿ ಗೊಂದಲಗಳು ಮೂಡಿದಾಗ, ಆ ಕುರಿತು ಮುಕ್ತವಾಗಿ ಮಾತನಾಡುವ ಮನೋಭಾವವನ್ನು ಅವರಲ್ಲಿ ದೃಢಪಡಿಸುವ ನಿಟ್ಟಿನಲ್ಲಿ ಈ ಸೆಕ್ಷುವಾಲಿಟಿ ಎಜುಕೇಷನ್ ಇರಬೇಕು' ಎನ್ನುವುದು ಚಿತ್ರಾ ಅವರ ಅಭಿಪ್ರಾಯ.

ಆದರೆ ದೇಹಭಾಷೆಗೆ ಸಂಬಂಧಿಸಿದಂತೆ ಮಕ್ಕಳಿಗೆ ತಿಳಿಹೇಳುವುದು ಸುಲಭದ ಸಂಗತಿಯೇನಲ್ಲ. 'ಇಷ್ಟರವರೆಗೆ ಜಗತ್ತು ಸಾಗಿ ಬಂದಿಲ್ಲವೇ? ಸೆಕ್ಷುವಾಲಿಟಿ ಎಜುಕೇಷನ್ ನೆಪದಲ್ಲಿ ಈ ಶಿಕ್ಷಕರು ನಮ್ಮ ಮಕ್ಕಳಿಗೆ ಏನು ಹೇಳಿಕೊಡುತ್ತಾರೋ ಏನೋ?' ಎಂಬ ಆತಂಕ ಪೋಷಕರಲ್ಲಿದೆ. ಆದರೆ ಇದೊಂದು ತಪ್ಪುಕಲ್ಪನೆಯಾಗಿದೆ. ಹದಿಹರೆಯದಲ್ಲಿ ದೊರೆಯುವ ಮಾರ್ಗದರ್ಶನವು ಮಕ್ಕಳಲ್ಲಿರುವ ಅನೇಕ ಗೊಂದಲಗಳನ್ನು ಬಗೆಹರಿಸುತ್ತದೆ. ಲೈಂಗಿಕ ವಿಚಾರಗಳ ಕುರಿತು ಸ್ಪಷ್ಟತೆ ಇದ್ದಾಗ, ಅವರ ಮುಂದಿನ ಜೀವನದಲ್ಲಿ ಗೊಂದಲಗಳು ಮೂಡುವುದಿಲ್ಲ. ತನ್ನ ಸಂಗಾತಿಯ ಅಗತ್ಯಗಳೇನು, ಸಹಜೀವನದ ವಿಧಾನಗಳೇನು ಎಂಬುದನ್ನು ಅವರು ಅರಿತುಕೊಳ್ಳುವುದು ವೈಯಕ್ತಿಕ ಅಗತ್ಯವಷ್ಟೇ ಅಲ್ಲ, ಸಮಾಜದ ಅಗತ್ಯವೂ ಹೌದು.

### ಅಂತರ್ಗತ ಪಾಠಗಳು

ಶಿಕ್ಷಣ ವ್ಯವಸ್ಥೆಯಲ್ಲಿ ಸೆಕ್ಷುವಾಲಿಟಿ ಎಜುಕೇಷನ್ ವಿಷಯವನ್ನು ಸೇರಿಸುವಂತೆ ರಾಜ್ಯಸರ್ಕಾರವನ್ನು ಆಗ್ರಹಿಸಿ 15 ವರ್ಷಗಳ



## ಸದ್ವರ್ತನೆಯ ಪಾತ್ರ

ಲಿಂಗ ಸೂಕ್ಷ್ಮ ಸಂವೇದನೆಯ ಕುರಿತು ಮಾತನಾಡುವುದು ತಪ್ಪಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಗಂಡುಮಕ್ಕಳ ಜೊತೆಗೆ ಮಾತನಾಡುವುದಕ್ಕೆ ದೊಡ್ಡವರು ಒಂದಿಷ್ಟು ಸಮಯ ಮಾಡಿಕೊಳ್ಳಬೇಕು. ಆದರೆ ಮಕ್ಕಳ ಜೊತೆ ಹೇಗೆ ಮತ್ತು ಏನು ಮಾತನಾಡಬೇಕು ಎಂಬುದು ದೊಡ್ಡವರಿಗೇ ಗೊತ್ತಿಲ್ಲದಂತಹ ಸ್ಥಿತಿ ಇದೆ. ಲಿಂಗ ಸೂಕ್ಷ್ಮ ಸಂವೇದನೆ ಆಮೂಲಾಗ್ರ ಬದಲಾವಣೆಯಾಗಬೇಕಾದ ಕ್ಷೇತ್ರ.

ಅತ್ಯಾಚಾರದ ಕುರಿತು ಸಾಕಷ್ಟು ಚರ್ಚೆಗಳು ನಡೆಯುತ್ತವೆ. ಆದರೆ, ಅತ್ಯಾಚಾರ ಎಂದರೆ ಏನು ಎಂಬ ವಿಷಯವನ್ನು ಮಕ್ಕಳಿಗೆ ಮೊದಲು ಹೇಳಬೇಕಾಗಿದೆ. ಕುತೂಹಲ ಮತ್ತು ಆಕರ್ಷಣೆಗೂ ಅತ್ಯಾಚಾರಕ್ಕೂ ಬಹಳ ವ್ಯತ್ಯಾಸವಿದೆ. ಈ ವಿಚಾರಗಳ ಬಗ್ಗೆ ಮಕ್ಕಳಿಗೆ ತಿಳಿಹೇಳಬೇಕಾಗಿದೆ. ಆದರೆ, ನಾವು ಎಲ್ಲಿಯೂ ಮಕ್ಕಳೊಡನೆ ಈ ವಿಚಾರಗಳನ್ನು ಮಾತನಾಡಿಲ್ಲ. ಮಾತನಾಡುವ ಒಂದು ಅವಕಾಶವನ್ನೂ ಸೃಷ್ಟಿಸಿಕೊಂಡಿಲ್ಲ. ಹಾರ್ಮೋನ್‌ಗಳ ಬದಲಾವಣೆ ಎಂಬುದು ನಿಯಂತ್ರಿಸಲಾಗದ ಅಥವಾ ವಿಕೃತಿಯನ್ನು ಪ್ರೇರೇಪಿಸುವ ವಿಚಾರ ಅಲ್ಲವೇ ಅಲ್ಲ. ಆದ್ದರಿಂದ ಅವುಗಳ ಸಹಜತೆಯ ಕುರಿತು ಗಂಡುಮಕ್ಕಳಿಗೆ ತಿಳಿ ಹೇಳಬೇಕಾಗಿದೆ. ಗಂಡುಮಕ್ಕಳೆಂದರೆ ಆಸ್ತಿಗೆ ವಾರಸುದಾರ, ಬದುಕಿಗೆ ವಾರಸುದಾರ ಎಂಬ ಭಾವನೆಗಳನ್ನು ತುಂಬುವುದು ಸರಿಯಲ್ಲ. ಗಂಡುಮಕ್ಕಳು ಸರಿಯಾದ ವರ್ತನೆಯನ್ನು ಕಲಿತಾಗ, ಹೆಣ್ಣುಮಕ್ಕಳೆಂದರೆ ಪೋಷಕರ ಹೆಗಲ ಮೇಲಿನ ಹೊಣೆಗಾರಿಕೆ ಎಂಬ ತಪ್ಪುಕಲ್ಪನೆ ಅಳಿಸಿಹೋಗುತ್ತದೆ. ಆದ್ದರಿಂದ ಸದ್ವರ್ತನೆಯ ಪಾಠವನ್ನು ಮೊದಲು ಗಂಡು ಮಕ್ಕಳಿಗೆ ಬೋಧಿಸಬೇಕಾಗಿದೆ.

**-ಸುಮತಿ ಡಿ.ಜಿ.**

'ಬಚ್‌ಪನ್ ಬಚಾವೋ' ಆಂದೋಲನದ ರಾಜ್ಯ ಸಂಯೋಜಕಿ

**ಲೈಂಗಿಕ ಶಿಕ್ಷಣ ದೊರೆತಾಗ ಮಕ್ಕಳ ಯೋಚನೆಗಳ ಧಾಟಿ ಬದಲಾಗುತ್ತದೆ. ಅವರು ತಮ್ಮ ಸುತ್ತಮುತ್ತ ನಡೆಯುವ ದೌರ್ಜನ್ಯಗಳನ್ನು 'ದೌರ್ಜನ್ಯ' ಎಂದು ಗುರ್ತಿಸುವುದನ್ನು ಕಲಿಯುತ್ತಾರೆ.**